# ರಾಣಿಯ ಆಕ್ರೋಶ



ರಾಣಿ ಮುಖರ್ಜಿ ನಾಯಕಿ ಆಗಿ ನಟಿಸಿದ ಸಿದ್ಧಾರ್ಥ ಮಲ್ಹೋತ್ರಾ ನಿರ್ದೇಶನದ 'ಹಿಚ್ಕೀ' ಚಿತ್ರಕ್ಕೆ ವಿಮರ್ಶಕರ ಮೆಚ್ಚುಗೆ ಲಭಿಸಿದೆ. ಉಗ್ಗುವಿಕೆಯ ಸಮಸ್ಯೆ ಇರುವ ಟೀಚರ್ ಆಗಿ ರಾಣಿಯ ಅಭಿನಯ ಮನೋಜ್ಞ ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಆದರೆ ಬಾಕ್ಸಾಫೀಸ್ ಕಲೆಕ್ಷನ್ ಮಾತ್ರ ಮಂಕಾಗಿದೆ. ಹಿಚ್ಕೀ ಮಾತ್ರವಲ್ಲ, ಅದೇ ಸಮಯದಲ್ಲಿ ಬಿಡುಗಡೆಯಾದ ಅಜಯ್ ದೇವಗನ್ ಅಭಿನಯದ 'ರೈಡ್' ಚಿತ್ರಕ್ಕೂ ಪ್ರೇಕ್ಷಕರಿಂದ ಅಂತಹ ಬೆಂಬಲ ದೊರಕಿಲ್ಲ. ಹಿಚ್ಕೀ ಚಿತ್ರ ಸಣ್ಣ ಬಜೆಟ್‌ನಲ್ಲಿ ಮಾಡಿರುವುದರಿಂದ ಹೂಡಿದ ಹಣಕ್ಕೇನೋ ಮೋಸವಿಲ್ಲ ಎನ್ನುತ್ತಿದೆ ಇಂಡಸ್ಟ್ರಿ.

ಬಹುಶಃ ಈ ಹಿನ್ನೆಲೆಯಲ್ಲೇ ಇರಬೇಕು– ರಾಣಿ ಬಾಲಿವುಡ್‌ನಲ್ಲಿ ಹೀರೋಗಳ ವೈಭವೀಕರಣದ ಬಗ್ಗೆ ಕಿಡಿ ಕಾರಿದ್ದು. 'ಬಾಲಿವುಡ್‌ನಲ್ಲಿ ಹೀರೋಯಿನ್‌ಗಳಿಗೆ ಮದುವೆಯಾಗಿ ಒಂದು ಮಗುವಾದರೆ ಸಾಕು, ಯಾವ ನಿರ್ಮಾಪಕರೂ ಅವಕಾಶ ಕೊಡುವುದಿಲ್ಲ. ಅವರಿಗೆ ನಾವೆಲ್ಲ ನಿರ್ಜೀವ ವಸ್ತುಗಳಂತೆ ಕಾಣುತ್ತೇವೆ. ಅದೇ ಹೀರೋಗಳು ಮದುವೆಯಾಗಿ ಎಷ್ಟೇ ಮಕ್ಕಳಾದರೂ, ಅವರಿಗೆ ಅವಕಾಶಗಳಿಗೆ ಕೊರತೆ ಇರುವುದಿಲ್ಲ. ಅವರ ಹೊಸ ಸಿನಿಮಾಗಳು ನಿರಂತರವಾಗಿ ನಿರ್ಮಾಣವಾಗುತ್ತಿವೆ' ಎನ್ನುವುದು ರಾಣಿಯ ನೇರ ನುಡಿ. ಒಂದು ಮಗುವಿನ ತಾಯಿ ರಾಣಿ, ಹೀಗೆ ಕಿಡಿ ಕಾರಿದ್ದಕ್ಕೆ ಹಿಚ್ಕೀ ಬಾಕ್ಸಾಫೀಸ್‌ನಲ್ಲಿ ಫೇಲ್ ಆದದ್ದು ಕಾರಣವೋ ಅಥವಾ ಸಹಜವಾಗಿಯೇ ಸಿಟ್ಟು ಬಂದಿದೆಯೋ ಗೊತ್ತಾಗಿಲ್ಲ.

ಹಾಗೆ ನೋಡಿದರೆ 2018ರ ಮೊದಲ ಮೂರು ತಿಂಗಳಲ್ಲಿ ಸಕ್ಸೆಸ್ ಸಂಖ್ಯೆ ಕಡಿಮೆಯೇ. ಸುಮಾರು 24 ಸಿನಿಮಾಗಳು 3 ತಿಂಗಳಲ್ಲಿ ಬಿಡುಗಡೆ ಯಾಗಿದ್ದು, ಪದ್ಮಾವತ್, ಸೋನು ಕೆ ಟಿಟು ಕಿ ಸ್ವೀಟಿ ಮತ್ತು ಪ್ಯಾಡ್‌ಮ್ಯಾನ್– ಈ ಮೂರು ಚಿತ್ರಗಳು ಮಾತ್ರ ನೂರು ಕೋಟಿ ರೂಪಾಯಿ ಕಲೆಕ್ಷನ್ ಗಡಿ ದಾಟಿವೆ. ಬಹು ನಿರೀಕ್ಷೆಯ ಅಯ್ಯಾರೆ, ಪರಿ, 1921 ಮುಂತಾದ ಸಿನಿಮಾಗಳೂ ನೆಲಕಚ್ಚಿವೆ.

ಕಳೆದ ವರ್ಷ ಯಶಸ್ಸಿನ ಸಂಖ್ಯೆ ಸ್ವಲ್ಪ ಹೆಚ್ಚೇ ಇದ್ದವು. ಆದರೆ ಬಹುತೇಕ ನಿರ್ಮಾಪಕರು ಗಮನಿಸದೇ ಇರುವ ಸಂಗತಿಯೊಂದಿದೆ. 2017ರಲ್ಲಿ ಕೇವಲ 2.20 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿದ 'ನಾಮ್ ಶಬನಾ' 5.40 ಕೋಟಿ ರೂಪಾಯಿ ಗಳಿಸಿದೆ. ಫಿಲ್ಲೌರಿ ಎಂಬ ಚಿತ್ರ 1.8 ಕೋಟಿ ರೂಪಾಯಿ ವೆಚ್ಚದಲ್ಲಿ ತಯಾರಾದದ್ದು 4 ಕೋಟಿ ರೂಪಾಯಿ ಗಳಿಸಿದೆ! 'ಸಣ್ಣದು ಸುಂದರ' ಎನ್ನುವ ಮಾದರಿಯನ್ನೇಕೆ ಹಿಂದಿ ನಿರ್ಮಾಪಕರು ಅನುಸರಿಸುತ್ತಿಲ್ಲ?

■ ಬಿಂದು

